

ಕೃಷಿಸಂಬಂಧಿ ವ್ಯಂಗ್ಯಚಿತ್ರ

ಕಷ್ಟವಾಗುವಷ್ಟು ಸುಂದರ.

ಈಚೆಗೆ ದಕ್ಷಿಣ ಕೊರಿಯಾದಲ್ಲಿ ಆಯೋಜನೆಗೊಂಡಿದ್ದ 'ಕಲಾತ್ಮಕ ಕೈಲಿಪಿ' (ಕ್ಯಾಲಿಗ್ರಫಿ) ಪ್ರದರ್ಶನದಲ್ಲಿ ಎಸ್ಸಾರ್ ಅವರ ಹಸ್ತಾಕ್ಷರ ಮಾದರಿಯು ಸ್ಥಾನ ಪಡೆದಿತ್ತು. ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ದ ಒಂದು ಗುಚ್ಛವನ್ನು ಕೈಲಿಪಿಯ ಮಾದರಿಗೆ ಎಸ್ಸಾರ್ ಬಳಸಿಕೊಂಡಿದ್ದರು.

'ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಲಹುದು? ಚಿತ್ರವಿಲ್ಲದ ಭಿತ್ತಿ ಸೊಗಸಹುದದೆಂತು? ನಿತ್ಯ ಸತ್ವವೆ ಭಿತ್ತಿ ಜೀವಿತ ಕ್ಷಣ ಚಿತ್ರ ತತ್ವವೀ ಸಂಬಂಧ ಮಂಕುತಿಮ್ಮ' – ಈ ಸಾಲುಗಳನ್ನು ಎಸ್ಸಾರ್ ಕಲಾತ್ಮಕವಾಗಿ ಕೈಲಿಪಿಯಲ್ಲಿ ಬರೆದಿದ್ದರು.

'ಪ್ರದರ್ಶನದಲ್ಲಿ ಕನ್ನಡವು ಮೊತ್ತಮೊದಲ ಬಾರಿಗೆ ಸ್ಥಾನ ಪಡೆದಿರುವುದು ಖುಷಿ ನೀಡಿದೆ. ಮುಖ್ಯವಾಗಿ ಬೈಬಲ್ ಸಂಬಂಧವಾದ ವಾಕ್ಯಗುಚ್ಛಗಳಿಗೆ ಅಲ್ಲಿ ಪ್ರಥಮಾದ್ಯತೆ. ಹೀಗಿದ್ದೂ ನಮ್ಮ ಹೆಮ್ಮೆಯ ಕಗ್ಗದ ಒಂದು ಗುಚ್ಛವನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಿದ್ದು ಖುಷಿ ನೀಡಿದೆ' ಎನ್ನುತ್ತಾರೆ ಶಿವರಾಂ. ಪ್ರದರ್ಶನಕ್ಕೆ ಸಂಬಂಧಪಟ್ಟಂತೆ ಅವರು ಪ್ರಶಂಸಾ ಪತ್ರವನ್ನು ಪಡೆದಿದ್ದಾರೆ.

ದಕ್ಷಿಣ ಕೊರಿಯ ಸರ್ಕಾರವು ಆಯೋಜಿಸಿದ್ದ ಹದಿನೈದನೇ 'ಚ್ಯೊಂಗ್‌ಯು ಜಿಕಜಿ ಅಂತರರಾಷ್ಟ್ರೀಯ ಕ್ಯಾಲಿಗ್ರಫಿ' ಪ್ರದರ್ಶನವಿದು. ಕೇರಳದ ತಿರುವನಂತಪುರದ ಪ್ರಸಿದ್ಧ ಮಲಯಾಳಂ ಕ್ಯಾಲಿಗ್ರಾಫರ್ ನಾರಾಯಣ ಭಟ್ಟಾತಿರಿ ಅವರ ಮಾರ್ಗದರ್ಶನದಂತೆ ಎಸ್ಸಾರ್ ಕ್ಯಾಲಿಗ್ರಫಿಯನ್ನು ಕಳುಹಿಸಿದ್ದರು.

ದೇಶದ ಎಲ್ಲಾ ಭಾಷೆಯ ಕಾಲಿಗ್ರಫಿಯನ್ನು ಆಯೋಜಕರು ಆಹ್ವಾನಿಸುತ್ತಾರೆ. ಹತ್ತು ಮಂದಿಯ ತಂಡ ಮೌಲ್ಯಮಾಪನ ಮಾಡಿ ಅಂಕ ನೀಡುತ್ತಾರೆ. ಹೀಗೆ ಆಯ್ಕೆಯಾದ ಮಾದರಿಯು ಪ್ರದರ್ಶನದಲ್ಲಿ ಸ್ಥಾನ ಪಡೆಯುತ್ತದೆ. ಭಾರತದಿಂದ ಹದಿನೈದಕ್ಕೂ ಹೆಚ್ಚು ಮಾದರಿಗಳು ಮೌಲ್ಯಮಾಪಕರ ಮೇಜನ್ನು ಅಲಂಕರಿಸಿದ್ದವು.

ಪುತ್ತೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ ಎಸ್ಸಾರ್ ಅವರದು ಅಂಚೆ ಸಹಾಯಕ ವೃತ್ತಿ. ಪ್ರವೃತ್ತಿಯಲ್ಲಿ ಹವ್ಯಾಸಿ ಚಿತ್ರ ಕಲಾವಿದ ಹಾಗೂ ವ್ಯಂಗ್ಯಚಿತ್ರಕಾರ. ಕೃಷಿ ಬದುಕನ್ನು ವಸ್ತುವಾಗಿಸಿ ಅವರು ರಚಿಸುತ್ತಿರುವ ವ್ಯಂಗ್ಯಚಿತ್ರಗಳು ಕೃಷಿ ಪತ್ರಿಕೆಗಳಲ್ಲಿ ಮಾನ್ಯತೆ ಪಡೆದಿವೆ. ಹಲವಾರು ಪುಸ್ತಕಗಳಿಗೆ ಮುಖಚಿತ್ರ ರಚಿಸಿದ್ದಾರೆ.

ಶಿವರಾಂ ಅವರ ಕಂಪ್ಯೂಟರ್ ಜ್ಞಾನ ಬೆರಗು ಮೂಡಿಸುತ್ತದೆ. ಕಂಪ್ಯೂಟರ್‌ನಲ್ಲಿ ರಚಿಸುವ ಮುಖಚಿತ್ರಗಳ ವಿನ್ಯಾಸಗಳಲ್ಲಿ ರಾಜಿಯಿಲ್ಲದ ನಿಲುವು. ತಾನು ದುಡಿಯುವ ಇಲಾಖೆಯಲ್ಲಿ ಕಂಪ್ಯೂಟರ್ ಜ್ಞಾನದ ತರಬೇತಿಗಳಲ್ಲಿ ನಿಷ್ಣಾತರು. ಈಚೆಗೆ ಹದಿಮೂರು ಭಾಷೆಯಲ್ಲಿ ನಮ್ಮ ರಾಷ್ಟ್ರಗೀತೆಯನ್ನು ಕ್ಯಾಲಿಗ್ರಫಿಯಲ್ಲಿ ಬರೆಯುವ ಯೋಜನೆಯೊಂದಕ್ಕೆ ಶಿವರಾಂ ಕನ್ನಡದಲ್ಲಿ ಕಲಾತ್ಮಕವಾಗಿ ನೇಯ್ದು ಕಳುಹಿಸಿದ್ದಾರೆ.




ಕೊರಿಯಾದಲ್ಲಿ ಪ್ರದರ್ಶಿತವಾದ ಕಲಾತ್ಮಕ ಕೈಲಿಪಿಯ ಮಾದರಿ ಹಾಗೂ ಅದಕ್ಕೆ ಸಂದ ಪ್ರಶಂಸಾ ಪತ್ರ


제 18-335 호

賞 狀

入 選

INDIA

Shivarama E.V

위 사람은 청주시가 주최하고 (사)세계 문자서예협회가 주관한 제15회 청주 직지세계문자서예대전에서 위와 같이 선정되었기 이에 상장을 수여합니다.

This award certificate has been presented to the above named person in recognition of his selection as the Honorable Mention in the 15th Cheongju Jikji International Letter Calligraphy Exhibition hosted by the City of Cheongju and conducted by World Letter Calligraphy Association.

2018년 10월 12일

世界文字書藝協會